ಅವರ ಅಂತ್ಯಸಂಸ್ಕಾರ ಮಾಡಿಸಿದ. ನಿರೀಕ್ಷಿತ ಸಾವು. ಆದರೂ ಎಲ್ಲರಿಗೂ ದುಃಖ.

ಸ್ಯಾಮನಿಗೆ ಆಗ ಅನ್ನಿಸಿತು – ಇಂದಲ್ಲ ನಾಳೆ ಮಮ್ಮಿಗೂ ಹೀಗೆ ಆಗಬಹುದು. ತಿಂಗಳಿಗೆ ಒಮ್ಮೆ ಹೋಗಿ ಅವಳನ್ನು ನೋಡುವ ಪರಿಪಾಠ ಮಾಡಿಕೊಂಡ. ಜೊತೆಗೆ ಬರುವಂತೆ ತಾರಾಳನ್ನು ಕರೆದ. ಮೊದಲ ಬಾರಿಗೆ, ಒಂದು ಶನಿವಾರ, ಹೊರಟಾಗ ಅವಳು ಹೇಳಿದಳು, ನನಗೇಕೋ ತೀರಾ ತಲೆನೋವು. ನೀನೊಬ್ಬನೇ ಹೋಗಿ ಬಾ. ಮುಂದಿನ ಬಾರಿ ನಾನು ಖಂಡಿತ ಬರುತ್ತೇನೆ." ಸ್ಯಾಮ್ ಒಬ್ಬನೇ ಹೋಗಿಬಂದ. ಒಂದು ತಿಂಗಳ ನಂತರ ಮತ್ತೆ ಸ್ಯಾಮ್ ಹೊರಟು ನಿಂತ. "ನನಗೆ ವೀಕ್ ಎಂಡ್ ಪೂರ್ತಿ ಆಫೀಸಿನ ಕೆಲಸ ಇದೆ. ಸಾರಿ.'' ಎಂದಳು. ಮುಂದಿನ ತಿಂಗಳು ಅವಳ ಸ್ನೇಹಿತೆಯರು ಅವಳಿಗಾಗಿ ಪಾರ್ಟಿ ಏರ್ಪಡಿಸಿದ್ದರು.

ಪ್ರತಿ ಬಾರಿಯೂ ಒಬ್ಬನೇ ಬರುತ್ತಿದ್ದುದನ್ನು ಗಮನಿಸಿದ ತಾಯಿ, ಬೆಲಿಂಡಾ ಕೇಳಿದಳು, "ಏನು ಸ್ಯಾಮ್ ಮತ್ತೆ ನೀನು ಒಬ್ಬನೇ ಬಂದಿದ್ದೀಯಾ? ಈ ಬಾರಿ ಅವಳು ಏನು ಸಬೂಬು ಕೊಟ್ಟಳು? ನೀನು ಬಂದೆಯಲ್ಲಾ ನನ್ನ ಮಾತಿಗೆ ಬೆಲೆಕೊಟ್ಟು. ಅಷ್ಟು ಸಾಕು. ಅವಳು ಬಂದರೆಷ್ಟು? ಬಿಟ್ಟರೆಷ್ಟು? ಇವೆಲ್ಲಾ ನನಗೆ ಅರ್ಥವಾಗುವುದಿಲ್ಲವೇ? ನೀವಿಬ್ಬರೂ ಸರಿಯಾಗಿದ್ದರೆ ಆಯಿತು'' ಎಂದಳು. ತಡೆಯಲಾಗದೆ ಅವಳು ಮತ್ತೊಂದು ಮಾತು ಸೇರಿಸಿದಳು.

"ನೀನು ನಿನ್ನ ಮಾವ ಮತ್ತಿತರಿಗೆ ಸಹಾಯ ಮಾಡುವುದು ಸರಿಯಾದದ್ದೇ. ಆದರೆ, ನಿನ್ನ ವ್ಯಕ್ತಿತ್ವ ಮತ್ತು ಘನತೆಗಳನ್ನು ಮಾರಿಕೊಳ್ಳುವುದು ಬೇಡ. ನೀನು ನಿನ್ನ ಸಂಸಾರ ನಡೆಸಬೇಕು. ಅವರ ಸಂಸಾರವನ್ನಲ್ಲ. ನಿನ್ನ ಮನೆಗೆ ನೀನು ಯಜಮಾನ ಆಗಬೇಕು, ಮರೆಯಬೇಡ.''

ತಾಯಿಯ ಮಾತು ಕೇಳಿದ ತಕ್ಷಣ ಸ್ಯಾಮನಿಗೆ ಕೋಪವೇ ಬಂದಿತ್ತು. ಆದರೆ, ಸಿಡ್ನಿಗೆ ಕಾರಿನಲ್ಲಿ ಹಿಂದಿರುಗುತ್ತಿದ್ದಾಗ ಅವಳ ಮಾತುಗಳೇ ಮರುಕಳಿಸಿದವು. ಅವಳು ಹೇಳಿದ್ದರಲ್ಲಿ ಏನೋ ನಿಜವಿದೆ ಎನ್ನಿಸಿತು ಅವನಿಗೆ. ಮುಂದಿನ ದಿನಗಳಲ್ಲಿ ತನ್ನತನವನ್ನು ಹೇಗೆ ಸ್ಥಾಪಿಸುವುದು ಎಂದು ಯೋಚಿಸಿದ. ತನ್ನ ಆಪ್ತ ಸ್ನೇಹಿತರೊಡನೆ ಮಾತನಾಡಿದ. ಅವರಿಂದ ಬಂದ ಒಂದು ಸಲಹೆ ಎಂದರೆ, "ನೀನು ಮತ್ತು ತಾರಾ ಸಿಡ್ನಿಯ ಈ ವಾತಾವರಣದಿಂದ ದೂರವಾಗಿ ಒಂದೆರಡು ವರ್ಷ ವಾಸಮಾಡಿ. ಎಲ್ಲಾ ಸರಿಹೋಗುತ್ತದೆ."

ಇದೊಂದು ಒಳ್ಳೆಯ ಸಲಹೆ ಎನಿಸಿತು ಅವನಿಗೆ. ಕೂಡಲೇ ತನ್ನ ಬಾಸ್ ಒಡನೆ ಮಾತನಾಡಿದ. ಅವನ ಉತ್ತರ ಸ್ವಾಗತಾರ್ಹ ಎನಿಸಿತು.

"ನಾನು ಎಷ್ಟೋ ದಿನದಿಂದ ನಿನಗೆ ಹೇಳಬೇಕೆಂದಿದ್ದೆ. ಸ್ಟಾಕ್ ಹೋಮ್ ಮತ್ತು ಜ್ಯೂರಿಚ್‌ಗಳ ಆಫೀಸುಗಳಲ್ಲಿ ನುರಿತ ಜನರಿಲ್ಲವಾಗಿದೆ. ಅವರು ನಿನ್ನಂತಹ ಎಕ್ಸ್‌ಪರ್ಟ್‌ಗಳನ್ನು ಹುಡುಕುತ್ತಿದ್ದಾರೆ. ನಿನಗೆ ಯೋಗ್ಯವಾದ ಕೆಲಸ ಅದು. ಅಲ್ಲಿ ಬಿಸನೆಸ್ ಹೆಚ್ಚು. ನಿನ್ನ ಭವಿಷ್ಯಕ್ಕೆ ಬಹಳ ಒಳ್ಳೆಯದು. ಅಲ್ಲಿ ತಾರಾಗೂ ಒಳ್ಳೆಯ ಕೆಲಸ ಸಿಗುವುದು ಗ್ಯಾರೆಂಟಿ. ನೀನು ಒಪ್ಪಿದ್ದೇ ಆದರೆ ಮುಂದಿನ ತಿಂಗಳೇ ಹೋಗಬಹುದು. ಸದ್ಯಕ್ಕೆ ಒಂದು ವರ್ಷಕ್ಕಾಗಿ. ಆದರೆ, ಅಲ್ಲಿಗೆ ಹೋದವರು ಯಾರೂ ಇಲ್ಲಿಗೆ ಹಿಂದಿರುಗಿ ಬಂದಿಲ್ಲ."

ಮರುಮಾತಾಡದೆ ಸ್ಯಾಮ್ ಜ್ಯೂರಿಚ್ಚಿಗೆ ಹೋಗಲು ಒಪ್ಪಿಗೆ ನೀಡಿದ. ಮನೆಗೆ ಬಂದು ತಾರಾಳಿಗೆ ವಿಷಯ ತಿಳಿಸಿದ. "ಇದಕ್ಕಿಂತ ಒಳ್ಳೆಯ ಅವಕಾಶ ಸಿಗುವುದಿಲ್ಲ. ಭರ್ಜರಿ ಸಂಬಳ. ಸುಲಭವಾಗಿ ಎಂ.ಡಿ ಆಗಬಹುದು. ನಾವಿಬ್ಬರೇ ಹೊಸ ಜಾಗದಲ್ಲಿ ಆರಾಮವಾಗಿ ಇರಬಹುದು. ಸ್ವಿಡ್ಜರ್ಲೆಂಡಿನಲ್ಲಿ ಹನಿಮೂನ್. ಈ ಅವಕಾಶ ತಪ್ಪಿಸಿಕೊಳ್ಳಬಾರದು."

"ನಿನ್ನ ಬಾಸಿಗೆ ಒಪ್ಪಿಗೆ ಕೊಡುವ ಮೊದಲು ನನ್ನನ್ನು ಒಂದು ಮಾತು ಕೇಳಬೇಕಿತ್ತು. ನೀನು ಹೇಳುವುದೆಲ್ಲಾ ಸರಿ. ಆದರೆ, ಡ್ಯಾಡಿಯನ್ನು ಬಿಟ್ಟು ನಾನು ಹೇಗೆ ಬರಲಿ? ನಿನಗೆ ಇದು ಹೊಳೆಯಲಿಲ್ಲವೇ? ಅದೂ ಅಲ್ಲದೆ ನಿನಗೆ ಚೆನ್ನಾಗಿ ಗೊತ್ತು. ಮುಂದಿನ ವರ್ಷ ನನಗೆ ಟೀಮ್ ಲೀಡರ್ ಆಗಿ ಪ್ರಮೋಷನ್ ಬರ್ತಾ ಇದೆ. ಇದನ್ನು ಬಿಟ್ಟು ನಾನು ಅಲ್ಲೆಲ್ಲೋ ಬಂದು ಬೇರೆ ಕೆಲಸ ಹುಡುಕಲಾರೆ."

ಒಂದೆರಡು ದಿನ ಗಂಡ ಹೆಂಡಿರ ನಡುವೆ ಇದೇ ಮಾತಾಯಿತು. ಯಾರೂ ಸೋಲಲಿಲ್ಲ. ತಾರಾ ಒಮ್ಮೆ, "ನೀನು ಬೇಕಾದರೆ..." ಎಂದವಳೇ ಮುಂದಿನ ಪದಗಳನ್ನು ನುಂಗಿಕೊಂಡಳು.

ಶಾಂತವಾಗಿದ್ದ ಸರೋವರಕ್ಕೆ ಯಾರೋ ಕಲ್ಲೆಸೆದಿದ್ದರು. ●